**INDIAN JOURNAL OF HISTORY AND ARCHAEOLOGY**
**ISSN (e):2582-225Xwww.ijha.in**
**Vol-6, Issue -6, November--December, 2024,**
**PageNo,17- 28**
**Peer -Reviewed, Refereed Journal**

# ಭಕ್ತಿಭಂಡಾರಿ ಬಸವಣ್ಣ ಮತ್ತು ಆದಿಗುರು ಪರಂಜ್ಯೋತಿ ಮಂಟೇಸ್ವಾಮಿ ನಡುವಣ ಅನುಸಂಧಾನ

**ನಾಗರಾಜು.ಎಂ.**[1]

ಉತ್ತರ ಕರ್ನಾಟಕದ ಕೆಲವೇ ಕಡೆ, ದಕ್ಷಿಣ ಕರ್ನಾಟಕದ ಹಳೇ ಮೈಸೂರು ಪ್ರಾಂತ್ಯ ಹಾಗೂ ರಾಮನಗರ ಜಿಲ್ಲೆಯ ಹಲವೆಡೆ ಮಂಟೇಸ್ವಾಮಿ ಜನಪದ ಮಹಾಕಾವ್ಯವು ತುಂಬಾ ಪ್ರಸಿದ್ಧಿ ಪಡೆದಿದೆ. ಹಾಗೆ ಹೇಳುವುದಕ್ಕಿಂತ ಮಂಟೇಸ್ವಾಮಿ ಕಥಾ ಪ್ರಸಂಗಗಳು ಭಾಳ ಹೆಸರುವಾಸಿ ಎನ್ನುವುದೇ ಸರಿ ಮತ್ತು ಸೂಕ್ತ.

ಮಂಟೇಸ್ವಾಮಿ ಪರಂಪರೆಯುಳ್ಳ ಜನಮಾನಸದಲ್ಲಿ ಮಂಟೇಸ್ವಾಮಿಯು ಒಬ್ಬ ಪವಾಡ ಪುರುಷ. ಧರೆಗೆ ದೊಡ್ಡವ, ಆದಿಗುರು, ಪರಂಜ್ಯೋತಿ, ಜಗತ್ ಸೃಷ್ಠಿಕರ್ತ, ದೇವಮಾನವ, ತಳಸಮುದಾಯಗಳ ಮೂಲಪುರುಷ ಮಾತ್ರವಲ್ಲ ಅವರ ಆರಾಧ್ಯ ದೈವ, ನಂಬಿದವರ ಮನೆಯೊಳಗೆ ಸಂಪತ್ತನ್ನೆ ತುಂಬಿ ತುಳುಕಾಡಿಸುವಂಥ ಕಾರುಣ್ಯಮೂರ್ತಿ. ಮಂಟೇಸ್ವಾಮಿಯನ್ನು ಅವರು ಅಲ್ಲಮ ಪ್ರಭು ಮಂಟೇದಲಿಂಗಯ್ಯ ಎಂತಲೂ ಸಂಬೋಧಿಸುತ್ತಾರೆ.

ಕೆಲವು ಹಬ್ಬಹರಿದಿನಗಳಲ್ಲಿ, ವ್ಯಕ್ತಿಸತ್ತ ೧೧–೧೨ನೇ ದಿನಗಳ ಕಾರ್ಯದಲ್ಲಿ ಮಂಟೇಸ್ವಾಮಿ ಕಥೆ, ಸಿದ್ಧಪ್ಪಾಜಿ ಕಥೆಗಳನ್ನು ನೀಲಗಾರರಿಂದ ಹಾಡಿಸಿ(ಕಥೆ ಮಾಡಿಸಿ) ಆ ಪರಂಜ್ಯೋತಿಯ ಕೃಪೆಗೆ ಪಾತ್ರರಾಗುವುದು ಈ ಜನಗಳ ಪರಂಪರೆ. ಮಂಟೇಸ್ವಾಮಿ ಕಾವ್ಯ ಹಾಡಿನ ರೂಪದಲ್ಲಿದ್ದರೂ ಆಚರಣಾತ್ಮಕ ಸಮಾಜದಲ್ಲಿ 'ಮಂಟೇಸ್ವಾಮಿ ಕಥೆ' ಎಂದೇ ಕರೆಯುವುದು ರೂಢಿ. ಕಡೇ ಪಕ್ಷ ಮುನ್ನೂರು ನಾನೂರು ವರ್ಷಗಳಿಂದ ಈ ಮಂಟೇಸ್ವಾಮಿ ಪರಂಪರೆ ಆಚರಣೆಯಲ್ಲಿದೆ ಎನ್ನಬಹುದು. ಕನ್ನಡ ಸಾಹಿತ್ಯ ಲೋಕದಲ್ಲಿ ಮೌಖಿಕ ಪರಂಪರೆಯ ಮಂಟೇಸ್ವಾಮಿ ಕಥಾ ಪ್ರಸಂಗಕ್ಕೆ ಕಾವ್ಯ ಅಥವಾ ಜನಪದ ಮಹಾಕಾವ್ಯ ಎಂದು ಮರುನಾಮಕರಣ ಮಾಡಿದ್ದು ಜಾನಪದ ವಿದ್ವತ್‌ವಲಯ; ತೀರಾ ಇತ್ತೀಚೆಗೆ

ಮೌಖಿಕ ಪರಂಪರೆಯ ನೀಲಗಾರರಿಂದ(ಕಲಾವಿದರು) ಮಂಟೇಸ್ವಾಮಿ ಕಾವ್ಯ/ಕಥೆಯನ್ನು ಕೇಳಿಸಿಕೊಂಡು–ಹೇಳಿಸಿಕೊಂಡು ಬರೆವಣಿಗೆಗೆ ಇಳಿಸಿ ದಾಖಲು ಮಾಡಿ ಪುಸ್ತಕ ರೂಪ ಕೊಟ್ಟ ಮೇಲೆ

[1] .ಅತಿಥಿ ಉಪನ್ಯಾಸಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

'ಕಾವ್ಯ', 'ಮಹಾಕಾವ್ಯ' ಎಂದು ಕರೆಯುವ ಪರಂಪರೆ ಬೆಳೆಯಿತು. ಈ ಮಾತು ಮಂಟೇಸ್ವಾಮಿ ಕಾವ್ಯಕ್ಕೆ ಮಾತ್ರವಲ್ಲದೆ 'ಮಲೆ ಮಾದೇಶ್ವರ ಕಾವ್ಯ', 'ಜುಂಜಪ್ಪಕಾವ್ಯ', 'ಸಿರಿಕಾವ್ಯ', 'ಮೈಲಾರ ಲಿಂಗನಕಾವ್ಯ'ಗಳಿಗೂ ಅನ್ವಯವಾಗುತ್ತದೆ.

ಇದೇ ಸಂದರ್ಭದಲ್ಲಿ ಮರೆಯದೆ ತಿಳಿಸಬೇಕಾದ ವಿಚಾರ ಇದು: ಪಾಶ್ಚಾತ್ಯ ಜಾನಪದ ವಿದ್ವತ್ ವಲಯವು ತಮ್ಮ ಮೌಖಿಕ ಪರಂಪರೆಯ ಕಾವ್ಯಗಳಾದ 'ಕಲೆವಾಲಾ', 'ಗಿಲ್ಗಮಿಷ್', 'ಬೋವುಲ್ಫ್'ಗಳನ್ನು 'ಅಪ್ಪಟ ಕಾವ್ಯ ಮಾತ್ರವಲ್ಲ ಶಿಷ್ಠ ಮಹಾಕಾವ್ಯಗಳ ಸಮನಿಲ್ಲುತ್ತವೆ' ಎಂದು ತೀರ್ಮಾನಿಸಿ ಈ ಅಭಿಪ್ರಾಯವನ್ನು ಜನಪ್ರಿಯಗೊಳಿಸಿದ ಮೇಲೆಯೇ ನಮ್ಮ ಪೌರಾತ್ಯ ದೇಶಗಳ; ಕನ್ನಡ ಮೌಖಿಕ ಪರಂಪರೆಯ ಕಾವ್ಯಗಳಿಗೂ 'ಪಂಪಭಾರತ', 'ಗದುಗಿನ ಭಾರತ' ಮುಂತಾದ ಶಿಷ್ಟ ಮಹಾಕಾವ್ಯಗಳಷ್ಟೇ ಮನ್ನಣೆ ದೊರೆತದ್ದು, ಅಲಕ್ಷಿತ ಸಮುದಾಯಗಳು ಮತ್ತು ತಳ ಸಂಸ್ಕೃತಿಗಳನ್ನು ಕುರಿತು ಆಸಕ್ತಿ ಹೆಚ್ಚಿ ಅಧ್ಯಯನ–ಸಂಶೋಧನೆ ನಡೆದು ಅವಕ್ಕೆ ವಿಶೇಷ ಒತ್ತು ಸಿಕ್ಕಿದ್ದು.

ಭಾರತೀಯ ತತ್ವದರ್ಶನಗಳಲ್ಲಿ, ದೇಶೀ ತಾತ್ವಿಕ ಪರಂಪರೆಯಲ್ಲಿ ಮಂಟೇಸ್ವಾಮಿಯ ಆಧ್ಯಾತ್ಮಿಕ ಚಿಂತನೆಗೆ ವಿಶೇಷ ಸ್ಥಾನವಿದೆ ಈಗ. ಶರಣ ಪರಂಪರೆಯಲ್ಲಿ ಅಥವಾ ವಚನ ಚಳವಳಿಯಲ್ಲಿ ಅಲ್ಲಮಪ್ರಭುವಿಗೆ ಇರುವಷ್ಟೇ ಮನ್ನಣೆ ಮಂಟೇಸ್ವಾಮಿಗೆ ಮೌಖಿಕ ಹಾಗೂ ಇತ್ತೀಚಿನ ಲಿಖಿತ ಪರಂಪರೆಗಳೆರಡರಲ್ಲೂ ಇದೆ.

ಜಂಗಮರೂಪಿಯಾಗಿದ್ದ ಶರಣ ಪರಂಪರೆ ಅಥವಾ ವಚನ ಚಳವಳಿಯು ೧೩–೧೫ನೇ ಶತಮಾನಗಳಲ್ಲಿ ಪರಿಪೂರ್ಣವಾಗಿ ವೈದಿಕ ರೀತಿಯಲ್ಲಿ ಸಾಂಸ್ಥಿಕ ರೂಪ ಪಡೆದಿದ್ದರಿಂದ ಮಂಟೇಸ್ವಾಮಿ ಚಳವಳಿಯನ್ನು ಆ ಮಠಶೈವ ಪರಂಪರೆಯ ವಿರುದ್ಧ ನಡೆದ 'ಆಧ್ಯಾತ್ಮಿಕ ದಂಗೆ' ಎಂದು ಜಾನಪದ ವಿದ್ವಾಂಸ –ವಿಮರ್ಶಕರು ಗುರುತಿಸುತ್ತಾರೆ.ಜಡಗೊಂಡ ಶೈವ ಪರಂಪರೆಯನ್ನು ಮಂಟೇಸ್ವಾಮಿ ಮತ್ತೆ ಜಂಗಮಗೊಳಿಸಲು ಶ್ರಮಿಸಿದ್ದರಿಂದ ಇದು ಪ್ರತಿ ಚಳವಳಿಯಾಗಲು ಸಾಧ್ಯವಾಯಿತು. ಆದರೆ ಈ ಚಳವಳಿಯ ಪ್ರಸ್ತಾಪ ಶಿಷ್ಟ ಸಾಹಿತ್ಯದಲ್ಲಿ ಸ್ಪಷ್ಟ ಮತ್ತು ದೃಢವಾಗಿ ದಾಖಲುಗೊಂಡಂತಿಲ್ಲ. ಮಂಟೇಸ್ವಾಮಿ ಕಾವ್ಯದಲ್ಲಿ ಅಥವಾ ಕಥಾಪ್ರಸಂಗಗಳಲ್ಲಿ ಮೇಲಿನ ಕಾರಣಗಳಿಗಾಗಿಯೇ ನನ್ನನ್ನು ಕಾಡುತ್ತಲೇ ಇರುವ 'ಕಲ್ಯಾಣ ಪಟ್ಟಣದ ಸಾಲು' ಕಥಾ ಭಾಗ ನನಗೆ ತುಂಬಾನೆ ಇಷ್ಟ.

"ಕಲ್ಯಾಣ ಪಟ್ಟಣದ ಸಾಲು' ಮಂಟೇಸ್ವಾಮಿ ಜನಪದ ಮಹಾಕಾವ್ಯದಲ್ಲಿ ೨ನೇ ಕಥಾಭಾಗ. ("ಬುಡಕಟ್ಟು ಮಹಾಕಾವ್ಯ ಮಾಲೆ : ಮಂಟೇಸ್ವಾಮಿ" ಕೃತಿಯಾಧರಿಸಿ) ಮೊದಲನೇ ಭಾಗ 'ಜಗತ್ತು ಸೃಷ್ಟಿಯ ಸಾಲು', ಮೂರು ಮತ್ತು ಮುಂದಿನ ಭಾಗಗಳಲ್ಲಿ ಮಂಟೇಸ್ವಾಮಿ ತನ್ನ ಜರ್ನಿಯ ಉದ್ದಕ್ಕೂ

ಪವಾಡ ಮೆರೆಯುವ ಮೂಲಕ ಸಾಂಸ್ಕೃತಿಕ ಸಂಘರ್ಷಗಳಲ್ಲಿ ಗೆದ್ದು ಶಿಶು ಮಕ್ಕಳನ್ನು ಪಡೆಯುವುದು, ತಾನು ನೆಲೆಗೊಂಡ ಅಲ್ಲಲ್ಲಿನ ಸ್ಥಳಗಳಲ್ಲಿ ತನ್ನ ಛಾಪು ಒತ್ತಿ ಸ್ವೀಕೃತಗೊಳಿಸುವುದು ಮುಂತಾಗಿ ಸಾಗುತ್ತದೆ. ಅಂತಿಮದಲ್ಲಿ ತನ್ನ ಗುರಿ ಉದ್ದೇಶ ಈಡೇರಿದ ಮೇಲೆ ಈ ನರಮಾನವರ ಸಹವಾಸ ಸಾಕೆಂದು ಏಳೆಂಟು ಆಳುದ್ದದ ಬಾವಿ ತೋಡಿಸಿ ಧರೆಗೆ ದೊಡ್ಡವರು ಅಲ್ಲಿ ಜೀವಂತ ಸಮಾಧಿಯಾಗುವುದು–ಇದಿಷ್ಟು ಕಾವ್ಯದ ಪ್ರಧಾನ ಧಾರೆಯಾಗಿದೆ.

ಮೊದಲು ಧರೆಗೆ ದೊಡ್ಡವರಾದ ಮಂಟೇಸ್ವಾಮಿ ಜಗತ್ತಿನ ನಿರ್ಮಾಣಕ್ಕಾಗಿ ಭೂಮಿಯನ್ನೇ ಸೃಷ್ಟಿಸಿ, ಆದಿಶಕ್ತಿ ತ್ರಿಮೂರ್ತಿಗಳು, ದೇವಾನುದೇವತೆಗಳನ್ನೆ ಪಡೆದು, ಸೂರ್ಯ ಚಂದ್ರರನ್ನೇ ಪಡೆದು ನರಮನುಷ್ಯರಿಗೆ, ಪ್ರಾಣಿಪಕ್ಷಿಗಳು–ಕ್ರಿಮಿ ಕೀಟಾದಿಗಳಿಗೆ ಭೂಮಿಯ ಮೇಲೆ ಜನ್ಮ ನೀಡಿ ಕಾಲಗಳು ಉರುಳಲು ಒಮ್ಮೆ ತಾವು ಸೃಷ್ಟಿಸಿದ ನರ ಜನುಮವನ್ನು ತಾವೇ ಕಣ್ಣಾರೆ ನೋಡಬೇಕೆನುತಾ ಕೈಲಾಸದಿಂದ ದೃಷ್ಟಿ ಮಡುಗುತ್ತಾರೆ. ಆಗ ಅವರಿಗೆ ವಿಶೇಷವಾಗಿ ಕಾಣಿಸಿದ್ದು ಆದಿ ಕಲ್ಯಾಣ. ಅಲ್ಲಿ ಕುಲೇಳು ಹದಿನೆಂಟು ಜಾತಿಗೂ ಲಿಂಗಕಟ್ಟಿ ಗಂಡುಹೆಣ್ಣು ಭೇದವಿಲ್ಲದೆ ಇಬ್ಬರಿಗೂ ಲಿಂಗಧಾರಣೆ ಮಾಡಿ ಜಾತ್ಯತೀತತೆ ಮೆರೆಯುತ್ತಿರುವ ಬಸವಣ್ಣನ ದೃಢ ಭಕ್ತಿ, ನೀಲಮ್ಮಳ ಪತಿವ್ರತತನ, ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರು; ಕೋಟಿಗೊಬ್ಬ ಭಕುತ ಕುಲಕ್ಕೊಬ್ಬ ಶರಣರ ದೃಢಮನವ ಈಗಲೀಗ ಪರೀಕ್ಷಿಸಬೇಕಲ್ಲಾ ಎನುತಾ ಉತ್ತರ ದೇಶದ ಕಡೆಯಿಂದ ಆದಿಕಲ್ಯಾಣಕ್ಕೆ ದಯಮಾಡಿಸುತ್ತಾರೆ.

ಹಾಗೆ ಬಂದವರು ಅದೇ ರೂಪದಲ್ಲಿ ದೃಢ ಭಕುತಿ ಪರೀಕ್ಷಿಸಲಾದೀತೆ? ತಮ್ಮ ನಿಜರೂಪ ಮರೆಸಿ ಕುಷ್ಠರೋಗಿಯೂ ಭಿಕ್ಷುಕನೂ ಆದಂಥ ವೇಷವ ಧರಿಸಿ ಕಲ್ಯಾಣ ಪಟ್ಟಣದ ರಾಡುಬಾಗಿಲಿಗೆ ಬಂದು ನಿಲ್ಲುತ್ತಾರೆ. ಆ ಹೆಬ್ಬಾಗಿಲಿನಲಿ ಕಟುಗರ ಸಂಗಯ್ಯ ದೊಣ್ಣೆ ಹಿಡಿದು ಬಸವಣ್ಣನ ಆಜ್ಞಾನುಸಾರ ನಿಂತಿರುತ್ತಾನೆ. ಅಲ್ಲಿ ಕಟುಗರ ಸಂಗಯ್ಯನಿಗೆ ಬಸವಣ್ಣನವರ (ತಪ್ಪು) ಆದೇಶ ಇಂತಿರುತ್ತದೆ: "ಅರವತ್ತಾರು ಮಂದಿ ಜಂಗಮರು ಮೂವತ್ತೂರು ಮಂದಿ ಮುನಾದ ಮುನಿಗಳು, ಲಕ್ಷದ ಮೇಲೆ ತೊಂಬತ್ತಾರು ಸಾವಿರ ಸತ್ಯುಳ್ಳಶರಣರು, ಕೋಟಿಗೊಬ್ಬ ಭಕ್ತ ಕುಲಕ್ಕೊಬ್ಬ ಶರಣ, ಲೋಕಾದಿ ಲೋಕವೆಲ್ಲಾ ನನ್ನನ್ನೇ ಮಹಾನ್ ಗುರು ಅಂದುಕೊಂಡಿದ್ದಾರೆ. ಆದರೆ ನನಗೆ ದೊಡ್ಡ ಗುರುಗಳಾಗುವಂಥ ಒಬ್ಬ ಮಹಾನ್ ಗುರು ಆದಿ ಕಲ್ಯಾಣಕ್ಕೆ ಇಂದು ಬರಲಿದ್ದಾರೆ. ಶಕುನವಾಗಿದೆ. ನಾನು ನಿತ್ಯ ನಡೆಸುವಂತೆ ಇಂದೂ ಏರ್ಪಡಿಸುವ ಜಂಗಮ ಪೂಜೆಗೆ, ದಾಸೋಹಕ್ಕೆ ಆ ಮಹಾಗುರು ಬರಲಿದ್ದಾರೆ. ಕುಷ್ಠದವರು ಖಾಯಿಲೆಯವರು ಭಿಕ್ಷುಕರೂ ಜಂಗಮರ ಜೊತೆ ನುಸುಳಿ ಬಂದುಬಿಡುತ್ತಾರೆ. ಅಂಥ ಯಾರನ್ನೂ ಒಳಗಡೆಗೆ ಬಿಡಬೇಡ. ಲಿಂಗಕಟ್ಟಿ ಕೊಂಡಿರುವ ಜಂಗಮರನ್ನಷ್ಟೇ ಸ್ವೀಕರಿಸಿಕೊಂಡು ಜಂಗಮ ಸೇವೆ ಮುಗಿದ ಮೇಲೆ ಭಿಕ್ಷುಕರನ್ನೂ ಒಳಕಳುಹಿಸಿಕೊಡು" ಹೀಗೆ ಎಚ್ಚರಿಸಿರುತ್ತಾರೆ ಕೂಡ.

ಕಟುಗರ ಸಂಗಯ್ಯನೂ ಅಂತೆಯೇ ಕಾರ್ಯ ಪ್ರವೃತ್ತನಾಗಿರುತ್ತಾನೆ. ಆದಿ ಕಲ್ಯಾಣದೊಳಗೆ ಬಸವಣ್ಣ ನೀಲಮ್ಮ ಇಬ್ಬರೂ ಲಿಂಗಪೂಜೆ ಜಂಗಮ ಸೇವೆಯಲ್ಲಿ ತಲ್ಲೀನರಾಗಿರುತ್ತಾರೆ. ಮಹಾಗುರು ಬರುವ ಮುನ್ಸೂಚನೆ ನಿರ್ಧರಿಸಿದ್ದಂತೆ. ನಾಲಗೆಯಿಲ್ಲದ ಚರ್ಮದ ಗಂಟೆ ಢಣಾಢಣಾ ನಾದ ಮಾಡುತ್ತದೆ. ಕಲ್ಲು ಬಸವ ಎದ್ದು ಗುಟುರುತ್ತದೆ. ಕುಡುವಿಲ್ಲದ ನಗಾರಿಯು ಶಬ್ದ ಮಾಡುತ್ತದೆ. ಆದರೆ ಪೂಜೆಯ ಗಲುಗು ಗದ್ದಲದಲ್ಲಿ ಮುಳುಗಿದ್ದ ಬಸವ ನೀಲಮ್ಮರಿಗೆ ಈ ಶಬ್ದ ಕೇಳಿಸುವುದೇ ಇಲ್ಲ.

ಇತ್ತ ಕುಷ್ಠರೋಗಿ ವೇಷಧಾರಿಯಾದ ಅಲ್ಲಮಪ್ರಭು ಮಂಟೇದ ಲಿಂಗಯ್ಯ ಪರಿಪರಿಯಾಗಿ ಬೇಡಿಕೊಂಡರೂ ಕಟುಗರ ಸಂಗಯ್ಯ ಒಳಗೆ ಬಿಡದೆ ಇಬ್ಬರ ನಡುವೆ ವಾದ ವಾಗ್ವಾದ ನಡೆದು ರೋಗಿಷ್ಟನ ಉದ್ಧಟತನದ ಮಾತುಗಳಿಗೆ ಸಂಗಯ್ಯ ಕೋಪಗೊಂಡು ಭಿಕ್ಷುಕ ರೂಪದ ಪರಂಜ್ಯೋತಿಯವರ ಎಕ್ಕತ್ತಿನ ಮೇಲೆ ಮೂರು ಗುದ್ದು ಗುದ್ದುತ್ತಾನೆ. ಸಿಟ್ಟಾದ ಅಲ್ಲಮಪ್ರಭು ಮಂಟೇಸ್ವಾಮಿ ಮುನಿದು ತನಗೆ ಬಿದ್ದ ಈ ಮೂರುಗುದ್ದು ಒಂಬತ್ತಾಗಿ ಆರುಗುದ್ದು ಬಸವಣ್ಣನಿಗೆ ಮೂರುಗುದ್ದು ನೀಲಮ್ಮಗೆ ಬೀಳಲಿ ಎನುತಾ ಶಾಪ ನೀಡಿ ವಾಪಸ್ಸು ಮೂಡಲುಕಡೆ ಹೊರಟುಬಿಡುತ್ತಾರೆ. ಅತ್ತ ಲಿಂಗಪೂಜೆ ಜಂಗಮ ಸೇವೆಯಲ್ಲಿ ತಲ್ಲೀನರಾಗಿದ್ದ ಬಸವ ನೀಲಮ್ಮರು ತಮಗೆ ಆರು–ಮೂರು ಏಟುಗಳು ಗುದ್ದಿದಂತಾಗಿ ಅಚ್ಚರಿಪಟ್ಟು ಗಂಡ ಹೆಂಡಿರು ಪರಸ್ಪರ ಮಾತಾಡಿಕೊಂಡು ಜ್ಞಾನೋದಯವಾಗಿ ಆತಂಕಗೊಂಡು 'ಆ ಶರಣ ಮಹಾತ್ಮ ಮಹಾಗುರು ಬಂದಿರಬೇಕು ನಮಗೆ ತಿಳೀಲಿಲ್ಲವಲ್ಲ' ಎನುತಾ ರಾಡು ಬಾಗಿಲಿಗೆ ಬಂದು ಕಟುಗರ ಸಂಗಯ್ಯನನ್ನು ವಿಚಾರಿಸುತ್ತಾರೆ. ಅಲ್ಲಿ ವಿಷಯ ತಿಳಿದು ಮತ್ತಷ್ಟು ಗಾಬರಿಗೊಂಡು ಮಹಾಗುರುವನ್ನು ಅರಸುತ್ತಾ ಕಲ್ಯಾಣದ ೯೭ ಬೀದಿಗಳಲ್ಲೂ ಹುಡುಕಲು ಹೊರಡುತ್ತಾರೆ. ಹೊರಟ ಸಂದರ್ಭದಲ್ಲಿ ತುಸು ದೂರದಲ್ಲೇ ನಡೆದುಕೊಂಡು ಹೋಗುತ್ತಿದ್ದ ಮಂಟೇಸ್ವಾಮಿಯನ್ನು ಕಟುಗರ ಸಂಗಯ್ಯ ತೋರಿಸಿದರೂ ಅವರಿಗೆ ಕಾಣಲಾಗಲಿಲ್ಲ. ಕಟುಗರ ಸಂಗಯ್ಯನಿಗೆ ಕಾಣಿಸುವ ಪರಂಜ್ಯೋತಿಗಳು ಬಸವ ನೀಲಮ್ಮರಿಗೆ ಗೋಚರಿಸುವುದಿಲ್ಲ.

ಸಂಗಯ್ಯನಿಗೆ ಕಾಣುವ ಮಹಾಸ್ವಾಮಿಗಳು ತಮಗೆ ಕಾಣಿಸುತ್ತಿಲ್ಲವಲ್ಲ ಎಂದು ಬಸವಣ್ಣ ದುಃಖಿತರಾಗಲು ನೀಲಮ್ಮಳೋ "ನಿಮ್ಮ ಕೊರಳಲ್ಲಿ ಕಟ್ಟಿರುವ ಲಿಂಗವನ್ನು ಕಳೆದು ಭೂಮಿ ಮೇಲಿರಿಸಿ. ಆ ಶರಣ ಮಹಾತ್ಮರನ್ನು ಲಿಂಗವೇ ನಮಗೆ ತೋರಿಸಿಕೊಡಲಿ" ಎಂದು ಸಲಹೆ ನೀಡುತ್ತಾರೆ. ಅಂತೆಯೇ ಗಂಡ ಬಸವಣ್ಣ ತಮ್ಮ ಲಿಂಗ ಕಳಚಿ ಭೂಮಿ ಮೇಲಿಟ್ಟು ಕೈ ಮುಗಿಯುತ್ತಾರೆ. ಲಿಂಗವೋ ಬುಡಬುಡನೆ ಉರುಳುತ ಮಂಟೇಸ್ವಾಮಿಯತ್ತ ಓಡುತ್ತದೆ. ಬಸವಣ್ಣ ನೀಲಮ್ಮರು ಹಿಂದೆ ಹಿಂದೆಯೇ ಹಿಂಬಾಲಿಸುತ್ತಾರೆ.

ಬಸವ ಕಲ್ಯಾಣದ ಮೇಲೆ ನಿಜವಾದ ವಿಮರ್ಶೆ ಮತ್ತು ಅದಿ ಕಲ್ಯಾಣದ ಪುನರ್ರಚನೆ, ಬಸವನ ಸತ್ಯ ಪರೀಕ್ಷೆ ಆರಂಭವಾಗುವುದೇ ಇಲ್ಲಿಂದ, ಮಹಿಮಾವಂತ ಲಿಂಗ ತನ್ನನ್ನು ಹಿಂಬಾಲಿಸಿಕೊಂಡು

ಬಂದರೂ ಲಿಂಗಕ್ಕಾಗಲೀ ಅವರಿಗಾಗಲೀ ಮಂಟೇಸ್ವಾಮಿ ತಮ್ಮನ್ನು ಬೇಗ ಕಾಣಿಸಕೊಡುವುದಿಲ್ಲ. ಕಲ್ಯಾಣದ ೯೭ ಬೀದಿಗಳಲ್ಲೂ ಹುಡುಕಾಡಿಸಿಕೊಳ್ಳುತ್ತಾರೆ.

ಜಂಗಮರು ಕಟ್ಟಿಕೊಳ್ಳುವ ಲೋಹಲಿಂಗಗಳ ಮೇಲೆ ಪವಾಡ ಪುರುಷ ಮಂಟೇಸ್ವಾಮಿ ಎಷ್ಟು ತಿರಸ್ಕಾರ, ಅನಾದರ, ನಿಕೃಷ್ಟ ಭಾವಗಳನ್ನು ತೋರುತ್ತಾರೆಂದರೆ ಮೊದಲು, ಬಸವಣ್ಣನ ಲಿಂಗವನ್ನೇ ಅವನೇ ಕಳಚುವಂತೆ ಮಾಡಿ ಆ ಲಿಂಗ ಹಾದಿಬೀದೀಲೆಲ್ಲಾ ಕಲ್ಲು ಮುಳ್ಳು ಕಸಕಡ್ಡಿ ಅನ್ನದೆ ಹೇಸಿಗೆ ಪಾಸಿಗೆ ಲೆಕ್ಕಿಸದೆ ಅದರ ಮೇಲೆಲ್ಲಾ ಉರುಳಾಡುತ್ತಾ ಕೊನೆಗೆ ೯೭ನೇ ಬೀದಿಯಲ್ಲಿ ಅಸ್ಪೃಶ್ಯ ಹರಳಯ್ಯನ ಮನೆಯ ಚರ್ಮದ ಅಟ್ಟಗಳು ಉನಿಯುತ್ತಾ ೧೨ ವರ್ಷಗಳಿಂದಲೂ ಕೊಳೆಯುತ್ತಿದ್ದ ಕಪ್ಪೆ ಪಾಯಸದ ನೀರಿಗೆ ಬಂದು ಬೀಳುವಂತೆ ಮಾಡುತ್ತಾರೆ ಪರಂಜ್ಯೋತಿ. ಹೊಸಬರೂ ಮಹಿಮಾ ಜಂಗಮರೂ ಆದ ತಮ್ಮನ್ನು ಕಾಣಲು ದಾರಿತೋರಿಸೆಂದು ಲಿಂಗವನ್ನೇ ಹಿಂಬಾಲಿಸುತ್ತಾ ಬಂದ ಬಸವ–ನೀಲಮ್ಮರಿಗೆ ಅನಂತರವೇ ಮಂಟೇಸ್ವಾಮಿ ದರ್ಶನ ಕೊಡುವುದು.

ಬಸವಣ್ಣ ತನ್ನ ಲಿಂಗವನ್ನು ಧರ್ಮಪತ್ನಿ ನೀಲಮ್ಮಳ ಸಲಹೆ ಮೇರೆಗೆ ಬಿಚ್ಚುವಂತೆ ಮಾಡಿರುವುದೊಂದು ವಿಶೇಷ ಇಲ್ಲಿ. ಲಿಂಗವ ಕಳಚಿದಲ್ಲದೆ ಬಸವಣ್ಣಗೇ ಆದಿಗುರು ಧರೆಗೆ ದೊಡ್ಡವರಾದ ಮಂಟೇದಲಿಂಗಯ್ಯ ಕಾಣಿಸಲಿಲ್ಲ. ಅಷ್ಟಕ್ಕೆ ನಿಲ್ಲಲಿಲ್ಲ ಶಿವನ ಕಾಣುವುದಕ್ಕೆ ನಿತ್ಯದೇಹಶುಚಿಯ ಅಗತ್ಯವಿಲ್ಲ, ಪಾದೋದಕ ತೀರ್ಥಪ್ರಸಾದಗಳ, ಜಪತಪ ನೇಮನಿಷ್ಠೆಯ ಗೊಡವೆಯಿಲ್ಲದೆ ಸಸ್ಯಾಹಾರವೇ ಬೇಕೆಂಬುದಿಲ್ಲದೆ ಶರಣರಿಗೆ ವಿರುದ್ಧವಾದ ಮಾಂಸಮದ್ಯಗಳನ್ನು ಸೇವಿಸಿಯೇ ಶಿವನ ಕಾಣಬಹುದೆಂಬುದನ್ನು ಸಾಬೀತು ಮಾಡಲು ಮಂಟೇಸ್ವಾಮಿಯು ರಕ್ತ ಸೋರುವ ತಮ್ಮ ದೇಹದ ಮಾಂಸವನ್ನು ಬಸವನಿಂದ ಹೊರಿಸಿ ಮದ್ಯದ ಗಡಿಗೆಯನ್ನು ನೀಲಮ್ಮರಿಂದ ಹಿಡಿಸಿಕೊಂಡು(ನೀಲಿಗೆ ಒಳಗುಮಾಡಿ) ಗುರುಮಠಕ್ಕೆ ಹೋಗುತ್ತಾರೆ. ಈ ದೃಶ್ಯ ಕಂಡ ಜಂಗಮರು ಸಹಜವಾಗಿಯೇ ಹೇಸಿ ಊಟ ಮಾಡುವುದನ್ನೂ ಬಿಟ್ಟು ಕಲ್ಯಾಣ ಕೆಟ್ಟು ಹೋಯಿತು. ಸಾಕ್ಷಾತ್ ಬಸವಣ್ಣನೇ ನಮ್ಮನ್ನು ಬತುಗೆಡಿಸಿಬಿಟ್ಟ ಅಂತ ಕೂಗುತ್ತಾ ಕಲ್ಯಾಣದ ಹೊರಕ್ಕೆ ಹೋಗುತ್ತಾರೆ. ಅಲ್ಲಿ ಕಲ್ಯಾಣಿಯಲ್ಲಿ ಸ್ನಾನ ಮಾಡುತ್ತಾರೆ.

ಬಸವಣ್ಣಗೇ ಲಿಂಗ ಬಿಚ್ಚಿಸಿದ ಮೇಲೆ ಉಳಿದ ರಂಡಾಮಂಡ ಕಳ್ಳಜಂಗಮರ(ಒಳ್ಳೆಯವರದೂ ಸೇರಿದಂತೆ) ಲಿಂಗಗಳನ್ನು ಕಳಚದೆ ಬಿಡುವರೆ ಅಲ್ಲಮಪ್ರಭು ಮಂಟೇದಲಿಂಗಯ್ಯ? ಕಳಚಿಸಿಯೇ ತೀರುತ್ತಾರೆ. ಉಪಾಯ ಹೂಡಿ ಉಳಿದ ಎಲ್ಲಾ ಜಂಗಮರ ನಿಜಶಿವಶರಣರ ಭಕ್ತಿಗೆ ಪರೀಕ್ಷೆ ಒಡ್ಡಿ ಅವರೆಲ್ಲರೂ ತಮ್ಮ ತಮ್ಮ ಲಿಂಗಗಳನ್ನು ಕಳಚಿ ತಾವು ಸ್ನಾನ ಮಾಡುತ್ತಿದ್ದ ಕಲ್ಯಾಣಿ ಕೊಳದ ನೀರಲ್ಲಿ ಬಿಟ್ಟು ಮತ್ತೇ ತಿರುಗಿ ಅವರು ಪಡೆಯದಂತೆ ಲಿಂಗವನ್ನು ಮಾಯಮಾಡಿ ಆ ಸವಾಲಿನಲ್ಲಿ ಅವರೆಲ್ಲಾ ಗೆಲ್ಲಲಾಗದಂತೆ ನೀಲಿ ಪವಾಡ ಮೆರೆದು ಎಲ್ಲರ ಒಳಕಳ್ಳಮನಸ್ಸನ್ನು ಬಟಾಬಯಲು ಮಾಡಿಬಿಡುವರು.

ಉಪಾಯದಿಂದ ಆ ಜಂಗಮರಿಂದಲೇ ಕಲ್ಯಾಣದ ಕಲ್ಯಾಣಿ ಕೊಳಕು ನೀರು ತೆಗೆಸುವ ಕಾಯಕ ಮಾಡಿಸಿ ಶರಣ ಲೋಕದ ಕೊಳಕನ್ನೂ ತೆಗೆಯಿಸಿ ಶರಣ ತತ್ವಕ್ಕೂ ಮರು ಜೀವ ತುಂಬುವರು.

ಕಲ್ಯಾಣಕ್ಕೆ ಗುರುಮಠಕ್ಕೆ ಬೇಕಿರುವುದು ಜಡಲಿಂಗಗಳಲ್ಲ ನಡೆನುಡಿ, ಆಚಾರ–ವಿಚಾರಗಳಲ್ಲಿ ಸತ್ಯಸಂದರಾದ ನಿಜಶರಣ ಮಹಾತ್ಮರು. ಅಂತಹ ಮಹಾಜಂಗಮರು ಶರಣರು ಇವರಲ್ಲಿ ಕೆಲವರೇ ಎಂದು ಅವರನ್ನು ಬಸವಣ್ಣಗೆ ದರ್ಶನ ಮಾಡಿಸಿ ಉಳಿದ ಕಳ್ಳ ಜಂಗಮರಿಗೆ ಕಲ್ಲು ಹೊಡೆಯುವ ವಡ್ಡಲಿಂಗಾಯತರಾಗಿ ಮುಂದೆ ಜನಿಸಿ ಎಂದು ಶಾಪಕೊಟ್ಟು ಈ ಜನ್ಮದ ಅವರನ್ನು ಕಲ್ಯಾಣದಿಂದಲೂ ಓಡಿಸಿ ಕಲ್ಯಾಣವನ್ನೇ ಪರಿಶುದ್ಧ ಗೊಳಿಸುತ್ತಾರೆ.

ನಮ್ಮ ನಮ್ಮ ಆತ್ಮದಲ್ಲಿರೋ ಲಿಂಗವೇ ಶಿವಲಿಂಗ, ಕಟ್ಟಿಕೊಳ್ಳುವ ಜಡಲಿಂಗಗಳ ಗೊಡವೆ ಬೇಡೆಂದು ಬಸವಣ್ಣ–ನೀಲಮ್ಮರಿಗೆ, ಉಳಿದ ಕೆಲವೇ ಸತ್ಯಸಂದ ಶರಣರಿಗೂ ಮನವರಿಕೆ ಮಾಡುವುದಲ್ಲದೆ ಆತ್ಮ ಸಾಕ್ಷಾತ್ಕಾರ ಮಾಡಿಸುತ್ತಾರೆ.

ಹೀಗೆಯೇ ಏಕೆ ಮಾಡಿದನೆಂದರೆ ೧೨ನೇ ಶತಮಾನದಲ್ಲಿ ಬಸವನಿಂದ ಲಿಂಗ ಕಟ್ಟಿಸಿಕೊಂಡ ಲಿಂಗವಂತರು ಮುಂದೆ ಲಿಂಗಾಯತ ಜಾತಿ ಮಾಡಿಕೊಂಡರು. ಮತ್ತೆ ಅದಕ್ಯಾಕೆ ಲಿಂಗ ಕಟ್ಟಿಕೊಳ್ಳಬೇಕಿತ್ತು ಸರ್ವರಲ್ಲೂ ಸಮಾನತೆ ತರಲು ಲಿಂಗ ಕಟ್ಟಿದರೆ ಅಸಮಾನತೆಯನ್ನು ಮತ್ತೂ ಸೃಷ್ಟಿಸಿಕೊಂಡರು. ಬಸವಪೂರ್ವ ಕೆಳವರ್ಗಗಳ ವಚನಕಾರರು ಬಸವ ಬಯಕೆಯ ಲಿಂಗಕಟ್ಟಿಕೊಂಡ ಶರಣರಲ್ಲ. ಆತ್ಮಲಿಂಗಧರಿಸಿದವರು, ಅಂಗವನ್ನೇ ಲಿಂಗವಾಗಿಸಿಕೊಂಡವರು. ಬಸವಣ್ಣನಿಗೇ ಮಾದರಿಯಾದವರು; ಬಸವಣ್ಣ ಅಂಗವ ಲಿಂಗಮಾಡಿ ದಾಸೋಹಕ್ಕೆ ಆ ಲಿಂಗವರ್ಪಿಸಿದ ಮಹಾಶರಣ ನಿಜ. ಆದರೆ, ಬಸವಣ್ಣನಿಂದ ಲಿಂಗ ಕಟ್ಟಿಸಿಕೊಂಡ ಬಹುಪಾಲು ಶರಣರು ಅವನ ಆಶಯವನ್ನೇ ಗಾಳಿಗೆ ತೂರಿಬಿಟ್ಟರು.

ಲಿಂಗ ಆತ್ಮದಲ್ಲಿ ನೆಲೆಗೊಳ್ಳಬೇಕೆ ಹೊರತು ದೇಹದ ಮೇಲಲ್ಲ ಎನುತ್ತಾ ದೇಹದ ಮೇಲಿನ ಲಿಂಗಗಳನ್ನು ಬಿಚ್ಚಿಸುವುದು ಹಾಗೂ ಉದರಂಬರಣಕ್ಕಾಗಿ ಲಿಂಗಕಟ್ಟಿಕೊಂಡ ರಂಡಾಪುಂಡ ಜಂಗಮರಿಂದ ಕಲ್ಯಾಣವನ್ನು ಮುಕ್ತಗೊಳಿಸುವುದಷ್ಟೇ ಈ ಕಾವ್ಯಭಾಗದ ಆಶಯವಾಗಿಲ್ಲ ಬಸವಣ್ಣನಾದಿಯಾಗಿ ಎಲ್ಲರೂ ಕಟ್ಟಿಕೊಂಡ ಲಿಂಗಗಳನ್ನು ನಿರಾಕರಿಸುವಂತೆ ಮಾಡುವುದೇ ಘನ ಉದ್ದೇಶವಾಗಿದೆ. ಅವಳಿ ಆಶಯವಾಗಿ ಕೆಳವರ್ಗಗಳ ಶರಣರ ಶ್ರೇಷ್ಠತೆಯನ್ನು ಎತ್ತಿ ತೋರಿಸುವುದರ ಗುರಿಯನ್ನೂ ಇದು ಇರಿಸಿಕೊಂಡಿದೆ.*

ಪರಂಜ್ಯೋತಿ ಮಂಟೇಸ್ವಾಮಿ ಇಷ್ಟೆಲ್ಲವನ್ನು ಮಾಡಿದ್ದು ತನ್ನ ಮಹಿಮೆಯಿಂದಲೇ ಎಂಬುದು ಗಮನಾರ್ಹ.

'ಉತ್ತರದೇಶ'** ದಿಂದ ಬಂದ ಮಂಟೇಸ್ವಾಮಿಗೆ ೧೨ನೇ ಶತಮಾನದ ಬಸವಣ್ಣನ ಜೊತೆ ಸಂಬಂಧವಿದ್ದು ವಚನ ಚಳವಳಿಗೆ ಆತ ಸಾಕ್ಷಿಯೂ ಆಗಿದ್ದ ಎಂಬ ವಿಚಾರ ಮತ್ತು ಅಲ್ಲಮಪ್ರಭುವೇ ಆ ಮಂಟೇಸ್ವಾಮಿ; ಇಬ್ಬರೂ ಬೇರೆ ಬೇರೆ ಆಗಿರದೆ ಒಬ್ಬರೇ ಆಗಿದ್ದರು ಎಂಬಂತಹ ರೂಪಕ ಮಂಟೇಸ್ವಾಮಿ ಕಾವ್ಯ (ಕಥನ)ದಲ್ಲಿ ಬರುವ ಈ ಎರಡೂ ಸಂಗತಿಗಳು ತಮ್ಮನ್ನು ನಂಬುವಂತೆ ನಮ್ಮನ್ನು (ಓದುಗರನ್ನು–ಕೇಳುಗರನ್ನು) ಒತ್ತಾಯಿಸುತ್ತದೆ. ಮಂಟೇಸ್ವಾಮಿ ಬೇರ್‍ಯಾರು ಆಗಿರದೆ ಅಲ್ಲಮಪ್ರಭುವೇ ಆಗಿದ್ದನೆಂಬುದಕ್ಕಾಗಲಿ ಬಸವಣ್ಣನ ಜೊತೆ ಸಂಬಂಧವಿರಿಸಿಕೊಂಡಿದ್ದ ಎಂಬುದಕ್ಕಾಗಲೀ ಮಂಟೇಸ್ವಾಮಿ ಮಹಾಕಾವ್ಯೇತರ ಬೇರೆಲ್ಲೂ ಆಧಾರಗಳು ಲಭ್ಯವಿರುವುದಿಲ್ಲ. ನಿಜ, ಆದರೆ ಸಂಶೋಧನೆಗಳ ಫಲಿತವಾಗಿ ಮಂಟೇಸ್ವಾಮಿಯು ಕಾಲ್ಪನಿಕ ವ್ಯಕ್ತಿಯಂತೂ ಅಲ್ಲ, ಕೇವಲ ನಾಲ್ಕೈದು ಶತಮಾನಗಳ ಹಿಂದಷ್ಟೇ ನಮ್ಮ ನಡುವೆ ಕನ್ನಡ ನಾಡಿನಲ್ಲೇ ಜೀವಿಸಿದ್ದಂತಹ ಸಂತ, ದಾರ್ಶನಿಕ ಎಂಬುದಂತೂ ಸಾಬೀತಾಗಿದೆ. ಮಂಟೇಸ್ವಾಮಿ ತಳಸಮುದಾಯದಲ್ಲಿ ಹುಟ್ಟಿ ಬೆಳೆದ ಮಹಾನ್ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ನಾಯಕ ಎಂಬುದಿಲ್ಲಿ ವಿಶೇಷ.

ಭಕ್ತಿ ಭಂಡಾರಿ ಬಸವಣ್ಣನ ವ್ಯಕ್ತಿತ್ವದ ಪ್ರತಿರೂಪ ಪಡೆದಂತಿದ್ದ ಕೊಡೇಕಲ್ಲು ಬಸವಣ್ಣ ದಾಸ ಪರಂಪರೆಗೂ ಪೂರ್ವದಲ್ಲಿ ಸರಿ ಸುಮಾರು ೧೫ನೇ ಶತಮಾನದಲ್ಲಿದ್ದನೆಂದು ಸಾಹಿತ್ಯ ಚರಿತ್ರೆಕಾರರು ನಂಬಿದ್ದಾರೆ. ಮಂಟೇಸ್ವಾಮಿಯು ಈ ಕೊಡೇಕಲ್ಲು ಬಸವನ ಶಿಷ್ಯರಲ್ಲಿ ಒಬ್ಬ ಎಂದೂ ಹೇಳುತ್ತಾರೆ.[೧] ಆದರೆ ಮಂಟೇಸ್ವಾಮಿ ಕಾವ್ಯವು ಮಂಟೇಸ್ವಾಮಿಯೇ ಕೊಡೇಕಲ್ಲು ಬಸವನ ಗುರುಸಮಾನರಾದ ಮಹಿಮಾ ಜಂಗಮ ಎಂಬುದನ್ನು ಸಾಭೀತು ಮಾಡುತ್ತದೆ. ಇವರಿಬ್ಬರಲ್ಲಿ ಗುರು ಯಾರು? ಯಾರು ಶಿಷ್ಯ? ಖಚಿತ ನಿರ್ಧಾರವಿಲ್ಲ. ಪರಸ್ಪರರು ಪರಸ್ಪರರ ಶ್ರೇಷ್ಠತೆಯನ್ನು ಮೆಚ್ಚಿಕೊಂಡವರು ಒಪ್ಪಿಕೊಂಡವರು, ಅಲ್ಲದೆ ತಾತ್ವಿಕ ಚರ್ಚೆ ವಾದ ವಾಗ್ವಾದಗಳನ್ನು ನಡೆಸಿ ಪರಸ್ಪರರಿಂದ ಪ್ರಭಾವಿತರಾಗಿರುವುದನ್ನು ಗಮನಿಸದರೆ ಮಂಟೇಸ್ವಾಮಿಯು ಕೊಡೇಕಲ್ಲು ಬಸವಣ್ಣನ ಸಮಾಕಾಲೀನ ಎಂಬುದಂತೂ ಖಚಿತವಾಗುತ್ತದೆ.

ಮಂಟೇಸ್ವಾಮಿಯು ೧೫೭೮–೧೬೧೭ರ ಸಂದರ್ಭದ ೧ನೇ ರಾಜ ಒಡೆಯರ್‌ರ ಸಮಕಾಲೀನ ಎಂಬ ಅಭಿಪ್ರಾಯವೂ ಇದೆ. ೧೫೭೨–೧೫೭೬ರ ಬೋಳುತಲೆ ನಾಲ್ವಡಿ ಚಾಮರಾಜ ಒಡೆಯರ್, ೧೫೭೮–೧೬೧೭ರ ೧ನೇ ರಾಜ ಒಡೆಯರ್ ಈ ಇಬ್ಬರಲ್ಲಿ ಯಾರಾದರೂ ಒಬ್ಬ ರಾಜನ ಸಮಕಾಲೀನ ಅಂತೂ ಆಗೇ ಆಗಿರುತ್ತಾನೆ.*** ಆದರೆ ಇಷ್ಟಂತೂ ಸತ್ಯ, ಮಂಟೇಸ್ವಾಮಿಗೆ "ಪಟ್ಟಭದ್ರ ಸಂಸ್ಕೃತಿಗೆ ವಿರುದ್ಧವಾದ ಕೆಳವರ್ಗಗಳ ಅಸ್ತಿತ್ವವನ್ನು ಪುನರ್ ಸ್ಥಾಪಿಸುವ ಪ್ರತಿ ಸಂಸ್ಕೃತಿಯೊಂದರ ನಿರ್ಮಾಣ ಇವನ ಉದ್ದೇಶವಿದ್ದಂತೆ ತೋರುತ್ತದೆ."[೨] ಇಲ್ಲಿ ಪ್ರತಿ ಸಂಸ್ಕೃತಿ ಎನ್ನುವುದಕ್ಕಿಂತಲೂ ವಚನ ಚಳವಳಿಯ

ಸಂದರ್ಭದ ಸಾಮಾಜಿಕ ಧಾರ್ಮಿಕ ಪರಿಸ್ಥಿತಿಯು ಮರುಕಳಿಸುವಂತೆ ಮಾಡಲು ಪ್ರಯತ್ನಿಸಿದ ಎನ್ನಬಹುದು. ಇಂಥ ೧೫ನೇ ಶತಮಾನದ ಮಂಟೇಸ್ವಾಮಿ ಮತ್ತು ೧೨ನೇ ಶತಮಾನದ ಬಸವಣ್ಣರ ನಡುವೆ ಜನಪದರು ಸಂವಾದ ಏರ್ಪಡಿಸಿದ್ದಾದರೂ ಹೇಗೆ? ಏಕೆ?.

ಇಲ್ಲಿ ನನ್ನ ಮುಖ್ಯ ಗಮನ ೧೫ನೇ ಶತಮಾನದ ಕೊಡೇಕಲ್ಲು ಬಸವಣ್ಣನನ್ನೇ ೧೨ನೇ ಶತಮಾನದ ಭಕ್ತಿಭಂಡಾರಿ ಬಸವಣ್ಣ ಅಂತ ಯಾಕೆ ಜನಪದರು ಭಾವಿಸಿಕೊಂಡರು ಎಂಬುದರ ಕಡೆಗೆ:

೧. ೧೨ನೇ ಶತಮಾನದ ಬಸವಣ್ಣ ಜಾತ್ಯತೀತ ಚಳವಳಿಯ ನೇತಾರ ಮಾತ್ರವಾಗಿರದೆ ಪವಾಡಪುರುಷ, ಮಹಿಮಾ ಜಂಗಮ, ದೈವಮಾನವ, ಶಿವಗಣೇಶ್ವರ, ಶಿವನ ನಂದಿ ಮುಂತಾಗೆಲ್ಲಾ ಜನಮಾನಸದಲ್ಲಿ ಬಿರುದು ಪಡೆದವ ಮತ್ತು ಜನಭಕ್ತಿಯನ್ನೂ ಗಳಿಸಿದ್ದವ. ಅಂತಹ ಬಸವಣ್ಣನಲ್ಲೂ ಇದ್ದ ಅರೆಕೊರೆಗಳನ್ನು ವಿಮರ್ಶಿಸುವುದೆಂದರೆ ಸಾಮಾನ್ಯ ಜಂಗಮನಿಂದಾಗದು ಮತ್ತು ತಮ್ಮಂಥ ಸಾಮಾನ್ಯರಿಂದಲೂ ನೇರ ಟೀಕೆ ನಡೆಯದು, ಹಾಗೆ ವಿಮರ್ಶಿಸಬೇಕಾದರೆ ಬಸವಣ್ಣನಿಗಿಂತಲೂ ಆತ ಮಹಿಮಾ ಜಂಗಮನಾಗಿರಬೇಕು ಎಂಬುದನ್ನು ಜಾನಪದ ಪ್ರಜ್ಞೆ ತಿಳಿದಿತ್ತು. ಜನಪದರಿಗೆ ತಮ್ಮ ಆರಾಧ್ಯ ಮೂಲಪುರುಷ ಮಂಟೇಸ್ವಾಮಿಯು ಅಂತಹ ಮಹಿಮಾವಂತ, ಶಕ್ತ ಸಂತನಾಗಿದ್ದು ಭಕ್ತಿ ಭಂಡಾರಿ ಬಸವನ ಅಪರಾವತಾರವಾದ ಕೊಡೆಕಲ್ಲು ಬಸವಣ್ಣನನ್ನೂ ಪರೀಕ್ಷಿಸಿ ಅರೆಕೊರೆಗಳನ್ನು ತಿದ್ದಿ ವ್ಯಕ್ತಿತ್ವಕ್ಕೆ ಮೆರಗು ನೀಡಿದ್ದರ ವಿಷಯವನ್ನು ಬಲ್ಲವರಾಗಿದ್ದರು.

೨. ಬಿಜ್ಜಳನ ಭಂಡಾರಿ ಬಸವಣ್ಣನ ಆದಿಯಾಗಿ ಎಲ್ಲಾ ಶರಣರನ್ನು ಪ್ರಶ್ನೆ ಮಾಡುವ ಅರೆಕೊರೆಗಳನ್ನು ತಿದ್ದುವ ಧೈರ್ಯ ಸ್ಥೈರ್ಯ ಇದ್ದದ್ದು ಅಲ್ಲಮಪ್ರಭುವಿಗೆ. ಆದಿಬಸವಣ್ಣನ ಶರಣ ಪರಂಪರೆಯನ್ನು ಗಟ್ಟಿಯಾಗಿ ವಿಮರ್ಶಿಸಿ ವಚನ ಚಳವಳಿಯ ಉತ್ಪನ್ನ ಅಥವಾ ಮುಂದುವರಿದ ಭಾಗವಾದ ಕೊಡೇಕಲ್ಲು ಬಸವಣ್ಣನ ಧೃಡ ಭಕ್ತಿಯನ್ನೇ ಪರೀಕ್ಷಿಸಿ ಅವನನ್ನೇ ಪ್ರಭಾವಿಸಿದ್ದವ ಆದಿಗುರು ಪರಂಜ್ಯೋತಿ ಮಂಟೇಸ್ವಾಮಿ ಮುಂದಣ ಜನಮಾನಸಕ್ಕೆ (ಪ್ರಮುಖವಾಗಿ ಕೆಳವರ್ಗದ ಜನಪದರಿಗೆ) ಭಕ್ತಿ ಭಂಡಾರಿ ಬಸವ, ಕೊಡೇಕಲ್ಲು ಬಸವ ಈ ಇಬ್ಬರಲ್ಲೂ ಸಾಮ್ಯ ಸಾದೃಶ್ಯತೆಗಳು ಕಂಡುಬಂದು ಅವರು ಇವರಿಬ್ಬರನ್ನೂ ಅಭೇದಿಕರಿಸಿ ತಮಗೆ ಬೇಕಾದ ಮೌಲ್ಯಗಳುಳ್ಳ ಹೊಸ ಕಥನವನ್ನು ಕಟ್ಟಿಕೊಂಡರು; ಹಳೆ ಹೊಸ ಘಟನೆಗಳನ್ನು ಕೂಡಿ ಕಳೆದು ಮರುಜೋಡಿಸಿಕೊಂಡು ಬಿಟ್ಟರು.

೩. ೧೨ನೇ ಶತಮಾನದ ಅಲ್ಲಮನ ತಾತ್ವಿಕತೆಯನ್ನು ಮಂಟೇಸ್ವಾಮಿಯೂ ಚೆನ್ನಾಗಿ ಬಲ್ಲವನಾಗಿದ್ದು ಮತ್ತು ಅಲ್ಲಮನ ವಿಚಾರಗಳು ತನ್ನ ತಾತ್ವಿಕತೆ ಮತ್ತು ತೀಕ್ಷ್ಣ ವೈಚಾರಿಕತೆಗೆ ಸರಿ ಹೊಂದುತ್ತಿದ್ದುದರಿಂದ ಅಲ್ಲಮನನ್ನು ಒಳಗು ಮಾಡಿಕೊಂಡು ಅಂದಿನ ಕನ್ನಡ ಜಗತ್ತನ್ನೇ ಮಂಟೇಸ್ವಾಮಿ

ಪ್ರಭಾವಿಸಿದ್ದಿರಬಹುದು. ಆ ಕಾರಣವಾಗಿ ಜನಪದರು ಮಂಟೇಸ್ವಾಮಿ ಮತ್ತು ಅಲ್ಲಮಪ್ರಭು ಇಬ್ಬರನ್ನೂ ಒಂದೇ ಮಾಡಿಕೊಂಡರು ಅನ್ನಿಸುತ್ತದೆ. ಮಂಟೇಸ್ವಾಮಿಯಂತೆಯೇ ಜಾನಪದಪ್ರಜ್ಞೆ ವಚನಚಳವಳಿಯನ್ನು ಬಸವಣ್ಣನ ಲಿಂಗಪೂಜೆ, ಜಂಗಮಸೇವೆ, ದಾಸೋಹ ಮುಂತಾದವನ್ನು ನಿಕಷಕ್ಕೆ ಒಡ್ಡಿ ವಿಮರ್ಶಿಸಿ ನಿಜವಾಗಿ ಆಗಬೇಕಿದ್ದ ಅಂದರೆ ಬಸವಣ್ಣ ಯಾವ ಸ್ವರೂಪದವನಾಗಿರಬೇಕಿತ್ತೋ ಆ ಅಪೇಕ್ಷಿತ ಸ್ವರೂಪವನ್ನು ಕೊಡೇಕಲ್ಲು ಬಸವಣ್ಣನಲ್ಲಿ ಮಂಟೇಸ್ವಾಮಿಯ ಮೂಲಕ ಕಂಡುಕೊಂಡರು ಅಥವಾ ಪ್ರತಿಸೃಷ್ಟಿಸಿಕೊಂಡರು. ಜಾನಪದಪಜ್ಞೆಯಲ್ಲಿ ವಚನಚಳವಳಿ ಮರುಮೌಲ್ಯ ಮಾಪನಕ್ಕೆ ಒಳಗಾಗಿ ಮರುಜೋಡಣೆಯಾದ ಈ ಹೊಸಮೌಲ್ಯವು ಮಂಟೇಸ್ವಾಮಿ ಜಾನಪದ ಮಹಾಕಾವ್ಯದ 'ಕಲ್ಯಾಣ ಪಟ್ಟಣದ ಸಾಲು' ಕಥಾಭಾಗದಲ್ಲಿ ಫಲಪ್ರದವಾಗಿ ಮೂಡಿಬಂದಿದೆ.

ಇಲ್ಲಿ ಎರಡೆರಡು ವ್ಯಕ್ತಿತ್ವಗಳ ಅಥವಾ ತತ್ವವಿಚಾರಗಳುಳ್ಳ ಸಂವಾದಗಳ ಹದವರಿತ ಸಂಮ್ಮಿಲನ ಆಗಿರುವುದೇ ದೊಡ್ಡ ಕಾವ್ಯ ಗುಣ.ಮಂಟೇಸ್ವಾಮಿ ಕೊಡೇಕಲ್ಲು ಬಸವಣ್ಣನ ಜೊತೆ ಸಂವಾದಿಸಿದ್ದರೆ ಅದೇ ಸಂವಾದದಲ್ಲಿ ಜಾನಪದಪ್ರಜ್ಞೆ ಅದೇ ಮಂಟೇಸ್ವಾಮಿ ಮೂಲಕ ೧೨ನೇ ಶತಮಾನದ ಬಸವಣ್ಣನ ಜೊತೆ ಸಂಭಾಷಿಸಿ ತನ್ನ ಆಶಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ಪ್ರತಿಭೆ ತೋರುತ್ತದೆ.

೧೨ನೇ ಶತಮಾನದ ಬಸವನಿಗೂ ೧೫ನೇ ಶತಮಾನದ ಬಸವನಿಗೂ ಇರುವ ವ್ಯತ್ಯಾಸ ಜನಪದರಿಗೆ ತಿಳಿದಿರಲಿಲ್ಲವೆಂದಲ್ಲ. ಅವರಿಬ್ಬರನ್ನು ಒಂದು ಮಾಡಿಕೊಂಡಿದ್ದರೆ ಅಥವಾ ಕೊಡೇಕಲ್ಲು ಬಸವಣ್ಣನನ್ನು ಭಕ್ತಿ ಭಂಡಾರಿ ಬಸವನನ್ನಾಗಿ ಪರಿವರ್ತಿಸಿಕೊಂಡಿದ್ದರ ಉದ್ದೇಶವಿಷ್ಟೇ: ಲಿಂಗಾಯತರ/ವೀರಶೈವರ ಜಡ ದೃಷ್ಟಿಧೋರಣೆಗಳಿಗೆ ಅದಕ್ಕೆ ಆದಿಮೂಲವಾದ ಚನ್ನಬಸವಣ್ಣ ಮುಂತಾದ ಪ್ರಮಥರ ಋಣಾತ್ಮಕ ಪರಿವರ್ತನೆಗೆ ಕೂಡಲಸಂಗಮದ ಬಸವಣ್ಣ ಪರೋಕ್ಷ ಕಾರಣ. ಆದ್ದರಿಂದಲೇ ಜಡತ್ವದ ಒಂದು ಭಾಗವೂ ಆಗಿದ್ದ ಆದಿಬಸವಣ್ಣನನ್ನೇ ಮೊದಲು ಪರಿವರ್ತನೆಗೆ, ಅಲ್ಲಮಾದಿಗಳ ದೃಷ್ಟಿಯ ಶರಣತ್ವಕ್ಕೆ ತಂದು ನಿಲ್ಲಿಸಬೇಕು ಎಂದೇ ಬೇರೆ ಬೇರೆ ಶತಮಾನಗಳಲ್ಲಿದ್ದ ಇಬ್ಬರೂ ಬಸವರನ್ನು ಒಂದೇ ಮಾಡಿ ನಿಜಶರಣತ್ವವನ್ನು ಮತ್ತೆ ಶೋಧಿಸಿಕೊಂಡರು ಎಂದರೆ ತಪ್ಪಾಗಲಾರದು. ಈ ಶೋಧಿಸಿಕೊಳ್ಳುವ ಪರಿಯಲ್ಲಿ ಕಲ್ಯಾಣಿಯನ್ನು ಶುದ್ಧಗೊಳಿಸುವುದು ಒಂದು ರೂಪಕವಷ್ಟೆ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಜನಪದರ ದೃಷ್ಟಿಯಲ್ಲಿ "ಕಲ್ಯಾಣ ಕೂಡ ಭ್ರಷ್ಟವಾಗಿತ್ತು. ಅದನ್ನು ಮಂಟೇಸ್ವಾಮಿ ಶುಚಿಗೊಳಿಸಿ ಬಸವಣ್ಣನವರಿಗೆ ಒಪ್ಪಿಸುತ್ತಾರೆ. ವೀರಶೈವ ಪುರಾಣಗಳು ಅಥವಾ ಶೂನ್ಯ ಸಂಪಾದನೆಗಳಲ್ಲಿ ಕಾಣಲಾಗದ ಈ ಚಿಕಿತ್ಸಕ ಆಶಯವನ್ನು ಮಂಟೇಸ್ವಾಮಿ ಕಾವ್ಯದಲ್ಲಿ ಕಾಣುತ್ತೇವೆ."[೩]

ಇದೆಲ್ಲವನ್ನು ಜನಪದರು ಅನಿವಾರ್ಯವಾಗಿ ದೈವಿಕ ನೆಲೆಯಲ್ಲೇ ಮಂಟೇಸ್ವಾಮಿ ಮೂಲಕ ಸಾಧಿಸಿಕೊಂಡರು ಅಷ್ಟೆ.

**ವಿಶೇಷ ಟಿಪ್ಪಣಿ :**

* ಭಕ್ತಿಯೆಂಬ ಕಚ್ಚಾಪದಾರ್ಥಗಳು ಬೆಂದು ಮಹಾಪಾಕವಾದುದು ಹರಳಯ್ಯ ಚೆನ್ನಯ್ಯ ಗುಂಡಯ್ಯ ಬೀರಯ್ಯ ಮುಂತಾದ ಕೆಳಸ್ತರದವರ ಆಚಾರ ವಿಚಾರಗಳಲ್ಲಿ.... ಹಾಗಾಗಿ ಮಂಟೇಸ್ವಾಮಿ ದೃಷ್ಟಿಯಲ್ಲಿ ನಿಜಶರಣರಾಗಿ ಉಳಿದವರೆಂದರೆ ಕೆಳವರ್ಗಗಳ ಶರಣರೆ, ಯಾಕೆಂದರೆ ಮಂಟೇಸ್ವಾಮಿಯ ಕಾಲಕ್ಕಾಗಲೇ ಪ್ರತ್ಯೇಕ(೧೫-೧೬ನೇ ಶತಮಾನ) ಅಸ್ತಿತ್ವಕ್ಕೆ ಬಂದು ಲಿಂಗಾಯಿತ/ವೀರಶೈವ ಧರ್ಮ ಬಲಿಷ್ಟ ಜಡ ಆಚರಣೆಯಾಗಿಬಿಟ್ಟಿದ್ದರಿಂದ ಮತ್ತು ಅವರು ಬಸವಣ್ಣನ ನಿಜ ಆಶಯವನ್ನೇ ತೂರಿ ಬಿಟ್ಟಿದ್ದರಿಂದ ನಿಜಶರಣರು ಕೆಳವರ್ಗದವರೇ ಎಂಬ ದೃಢ ನಿರ್ಧಾರಕ್ಕೆ ಜಾನಪದ ಪ್ರಜ್ಞೆ ಬಂದಿರುತ್ತದೆ ಮತ್ತು ಆದಿಯಿಂದ ವಚನ ಚಳವಳಿಯ ಪೂರ್ವದಿಂದಲೇ ಎಂಬಂತೆ ನಿಜ ಶರಣರ ಹುಡುಕಾಟ ನಡೆಸುತ್ತಾರೆ. ಎಳ್ಳುಜಳ್ಳುಗಳನ್ನೂ ತೂರಿ ಆ ನಿಜ ಶರಣತ್ವವನ್ನು ಹುಡುಕಿಕೊಳ್ಳುವ ಪರಿಯೇ ಮಂಟೇಸ್ವಾಮಿ ಚಳವಳಿ ಅಥವಾ ಪರಂಪರೆ.

** ಈ ಉತ್ತರ ದೇಶ ಯಾವುದು? ಮಂಟೇಸ್ವಾಮಿ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಪ್ರಸಿದ್ಧಿಯಿರುವುದರಿಂದ ಮತ್ತು ಇಲ್ಲಿಗೆ ಉತ್ತರ ಕರ್ನಾಟಕದಿಂದ (ಗುಲ್ಬರ್ಗ-ಆದಿಕಲ್ಯಾಣ) ಬಂದಿದ್ದರಿಂದ ದಕ್ಷಿಣಕ್ಕೆ ಅದು ಉತ್ತರವೇ ಸರಿ. ಆದರೆ ಕಾವ್ಯದಲ್ಲಿ ಬಸವಣ್ಣನ ದುಡಭಕುತಿ ನೋಡಲು ಆರಂಭದಲ್ಲೇ ಉತ್ತರ ದೇಶದಿಂದ ಬಂದ ಎಂದಿರುವುದರಿಂದ ಈ ಉತ್ತರ ಯಾವುದೆಂಬುದೇ ನಮಗೆ ಮುಖ್ಯ.

ಸಾಂಸ್ಕೃತಿಕವಾಗಿ ನಮ್ಮ ದಕ್ಷಿಣ ಕಡೆಗಳಲ್ಲಿ ಶ್ರೇಷ್ಟವಾದವೆಲ್ಲಾ ಉತ್ತರದಿಂದ ಬಂದವೆ ಎಂಬ (ಕೆಟ್ಟ)ಕಲ್ಪನೆಯೊಂದಿದೆ. ಅದು ಒತ್ತಟ್ಟಿಗಿರಲಿ. ವಾಸ್ತವವಾಗಿ ಮಂಟೇಸ್ವಾಮಿಯ 'ಮಂಟ' ಪದವು 'ಉರಿ' ಎಂಬರ್ಥದಲ್ಲಿ ಹಳೇ ಆಂಧ್ರಪ್ರದೇಶದ ಉತ್ತರ ಭಾಗದ ಮೂಲಕ್ಕೆ ಕೊಂಡೊಯ್ಯುತ್ತದೆ. ಅಂದರೆ ಅಲ್ಲಿಂದ ಆತ ಕರ್ನಾಟಕಕ್ಕೆ ಬಂದ ಮೇಲೆ ತನ್ನ ಜರ್ನಿಯಲ್ಲಿ ಮೊದಲು ಚೆನ್ನಾಗಿ ಕನ್ನಡ ಕಲಿತು ಆಮೇಲೆ ದಕ್ಷಿಣಕ್ಕೆ ಬರುತ್ತಾ ಶಿಶುಮಕ್ಕಳನ್ನು ಒಕ್ಕಲುಗಳನ್ನು ಪಡೆದು ಪ್ರಸಿದ್ಧನಾಗಿರಬಹುದು.

ಮಧ್ಯ ಕರ್ನಾಟಕದಲ್ಲಿ 'ಗುರುಭಾರಲಿಂಗಯ್ಯ' ಎಂಬ ಗುರುವಿನಲ್ಲಿ ಮಂಟೇಸ್ವಾಮಿ ಮೊದಲು ಶಿಷ್ಯನಾಗಿದ್ದು ಅನಂತರ ಗುರುವಿನ ಆಜ್ಞೆಯ ಮೇರೆಗೆ ಕಲ್ಯಾಣದ ಕಡೆಗೆ ನಡೆದ ಎಂಬ ಅಭಿಪ್ರಾಯವೂ ಇದೆ. ಇದನ್ನು ಒಪ್ಪಿಕೊಂಡು ಮಂಟೇಸ್ವಾಮಿ ಗುರುಭಾರಲಿಂಗಯ್ಯನಲ್ಲಿಗೆ ಬರುವ ಮೊದಲು ಎಲ್ಲಿಂದ ಬಂದ ಎಂಬುದನ್ನು ಪ್ರಶ್ನೆ ಮಾಡಿಕೊಂಡರೂ ಇಲ್ಲಿಯೂ 'ಉತ್ತರ ದೇಶ' ಎಂಬ ಪದ ಆಧರಿಸಿ ಹಳೇ

ಆಂಧ್ರದ ಉತ್ತರ ಭಾಗದ ಕಡೆಗೆ ಮಂಟೇಸ್ವಾಮಿಯವರ ಮೂಲಸ್ಥಾನವನ್ನು ಗುರುತು ಮಾಡಬೇಕಾಗುತ್ತದೆ.

ಮೈಸೂರು ಒಡೆಯರೊಬ್ಬರ ಮಹಾರಾಣಿಯಿಂದ ಆಕೆಯ ಮಗಳು ದೊಡ್ಡಮ್ಮ ತಾಯಿಯನ್ನು ಶಿಶುಮಗಳಾಗಿ (ದತ್ತು) ಭಿಕ್ಷೆ ಪಡೆಯುವ ವಿಚಾರ ಮಂಟೇಸ್ವಾಮಿಯ ಕಾವ್ಯದಲ್ಲಿ ಬರುತ್ತದೆ. ಅದೆಂದರೆ:

ಕಾರುಗಳ್ಳಿ ಮಾರನಾಯಕ ಮೈಸೂರು ಒಡೆಯರೊಬ್ಬರಿಗೆ ಪತ್ರ ಬರೆದು ಅವರ ಮಗಳನ್ನು ಅಂದರೆ ದೊಡ್ಡಮ್ಮ ತಾಯಿಯನ್ನು ಮದುವೆಗೆ ಹೆಣ್ಣು ಕೇಳುತ್ತಾನೆ.

ಅರಸರಾದ ಒಡೆಯರು ನಾಯಕನಾದ ಮಾರನಾಯಕನ ರಕ್ತಸಂಬಂಧ ಬೆಳೆಸಲು ಇಚ್ಛಿಸದೆ ಬದಲಾಗಿ ಮಂಟೇಸ್ವಾಮಿಗೆ ತಮ್ಮ ಮಗಳನ್ನು ಕಾರಂಜಿ ಕೆರೆ ಏರಿ ಮೇಲೆ ಭಿಕ್ಷೆ ಕೊಟ್ಟುಬಿಡುತ್ತಾರೆ.

ಕಾರುಗಳ್ಳಿ ಮಾರನಾಯಕ ಪತ್ರ ಬರೆದದ್ದು ಮೈಸೂರು ಒಡೆಯರ ಪರಂಪರೆಯ ನಾಲ್ವಡಿ ಕೃಷ್ಣರಾಜರಿಗೆ ಎಂಬಂತೆ ಕಾವ್ಯದಲ್ಲಿದೆ ಆದರೆ ವಾಸ್ತವವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲ ೧೮೯೪–೧೯೪೦. ಜನಪದರು ಇಲ್ಲಿ ೧೫೭೨–೧೫೭೬ ರ ಸಂದರ್ಭದ ಬೋಳುತಲೆ 'ನಾಲ್ವಡಿ' ಚಾಮರಾಜ ಒಡೆಯರನ್ನೇ ತಪ್ಪಾಗಿ 'ನಾಲ್ವಡಿ' ಕೃಷ್ಣರಾಜ ಒಡೆಯರೇ ಎಂದು ಭಾವಿಸಿದಂತೆ ತೋರುತ್ತದೆ, ಅದಕ್ಕೆ ಜನಮಾನಸದಲ್ಲಿ ನಾಲ್ವಡಿ ಕೃಷ್ಣರಾಜರ ಪ್ರಸಿದ್ಧಿಯೇ ಕಾರಣವಿರಬಹುದು.

"ವಾಸ್ತವವಾಗಿ ಈ ಮಾರನಾಯಕನ ಐತಿಹಾಸಿಕ ಹಿನ್ನೆಲೆಯೆಂದರೆ ಒಡೆಯರ್ ಆರಂಭಕ್ಕೂ ಪೂರ್ವ ಮೈಸೂರು ಮಹಾರಾಜ ಶೂರದೇವನ ವಂಶಜನಾದ ಚಾಮರಾಜ ಮಹಾರಾಜನು ಗಂಡುಮಕ್ಕಳಿಲ್ಲದೆ ಕಾಲವಾಗಿರುತ್ತಾನೆ. ಆದರೆ ಇದ್ದ ಅವರ ಒಬ್ಬಳೇ ಮಗಳು ಬಾಲಕಿ ರಾಜಮಲ್ಲಿಗೆ ದೇವರಾಜಮ್ಮಣ್ಣಿಯನ್ನು ವಿವಾಹವಾಗುವಂತೆ ಅಲ್ಲಿನ ದಳಪತಿ ಮಾರನಾಯಕ ಹಿಂಸೆ ನೀಡುತ್ತಿರುತ್ತಾನೆ. ವಿಷಯ ತಿಳಿದ ಯದುರಾಯ ಅರಮನೆ ಸೈನಿಕರ ಸಹಾಯ ಪಡೆದು ಮಾರನಾಯಕನನ್ನು ಕೊಂದು ಮಹಾರಾಣಿ ಲಕ್ಷ್ಮಮ್ಮಣ್ಣಿಯ ಮಗಳು ದೇವರಾಜಮ್ಮಣ್ಣಿಯನ್ನು ವಿವಾಹವಾಗಿ ಮುಂದೆ ಮೈಸೂರು ಒಡೆಯರ ಪರಂಪರೆಗೆ ಅಡಿಗಲ್ಲಾಗುತ್ತಾನೆ."[೪]

ಹಾಗಾಗಿ ಈ ದೊಡ್ಡಮ್ಮತಾಯಿ ಒಡೆಯ ಪರಂಪರೆಗೂ ಪೂರ್ವದ ಮಾರನಾಯಕನ ಸಂದರ್ಭದ ಚಾಮರಾಜನ ಮಗಳೋ ಅಥವಾ ೧೫ನೇ ಶತಮಾನದ (ಮಂಟೇಸ್ವಾಮಿ ಮತ್ತು ಕೊಡೇಕಲ್ಲು ಬಸವ ಕಾಲಘಟ್ಟದ ೧೫ನೇ ಶತಮಾನ ಆಗಿರುವುದರಿಂದ) ಒಡೆಯರ್ ವಂಶಜಳೋ ಇದನ್ನು ಸ್ಪಷ್ಟಪಡಿಸಿಕೊಳ್ಳಬೇಕಾದರೆ ಒಡೆಯರ್ ವಂಶದ ಯಾವ ರಾಜರಾಣಿಯರು ತಮ್ಮ ಮಗಳನ್ನು ಸಂತರೊಬ್ಬರಿಗೆ ದತ್ತು ನೀಡಿರಬಹುದು ಎಂಬುದನ್ನು ಇತಿಹಾಸ ಕೆದಕಿ ತಿಳಿಯಬೇಕಾಗಿದೆ.

ಆದರೆ ಈ ದೊಡ್ಡಮ್ಮ ತಾಯಿ ಕಾಗಿನೆಲೆಯ ಸರಶೆಟ್ಟಿ ಮಗಳು ಎಂಬ ಬಲವಾದ ಅಭಿಪ್ರಾಯವೂ ಕೆಲ ವಿದ್ವಾಂಸರಲ್ಲಿ ಇದೆ.

**ಕೊನೆ ಟಿಪ್ಪಣಿಗಳು**

೧. ಮಧ್ಯಕಾಲೀನ ಕನ್ನಡ ಸಾಹಿತ್ಯ: ಸಂ:ಡಾ.ಅಕ್ಕಮಹಾದೇವಿ. ಕನ್ನಡ ಭಾಷಾಭಿವೃದ್ಧಿ ಯೋಜನೆ, ಮೈಸೂರು, ಪ್ರಕಟಣೆ: ೨೦೧೧ ಕನ್ನಡ ವಿಶ್ವಕೋಶ, ವಿಷಯವಾರು ಗ್ರಂಥಮಾಲೆ, ಮು:೨೦೧೧, ಪ್ರಕಾಶಕರು: ಕು.ಸ.ಅ.ಸಂ. ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,

೨. ಬುಡಕಟ್ಟು ಮಹಾಕಾವ್ಯ ಮಾಲೆ: ಮಂಟೇಸ್ವಾಮಿ, ಪುಟ XIV ಸಂ: ಹಿ.ಚಿ.ಬೋರಲಿಂಗಯ್ಯ ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಮುದ್ರಣ: ೧೯೯ ಮೊದಲ ಮುದ್ರಣ.

೩. ಮಂಟೇಸ್ವಾಮಿಕಾವ್ಯ. ಹಿ.ಚಿ.ಬೋರಲಿಂಗಯ್ಯ ಪುಟ. XVI, ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಮುದ್ರಣ: ೧೯೯ ಮೊದಲ ಮುದ್ರಣ.

೪. ವಾರದ ಮಿತ್ರ, ಸಾಪ್ತಾಹಿಕ ಪುರವಣಿ, ಮೈಸೂರು ಮಿತ್ರ ಭಾನುವಾರ, ೧೧–೨೦೧೬ .೧–೨

**ಪರಾಮರ್ಶನ ಗ್ರಂಥಗಳು:**

೧. ಬುಡಕಟ್ಟು ಮಹಾಕಾವ್ಯ ಮಾಲೆ: ಮಂಟೇಸ್ವಾಮಿ ಸಂ: ಹಿ.ಚಿ.ಬೋರಲಿಂಗಯ್ಯ ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಮುದ್ರಣ: ೧೯೯ ಮೊದಲ ಮುದ್ರಣ.

೨. ಮಂಟೇಸ್ವಾಮಿ ಕಾವ್ಯ, ಓದು ಪಠ್ಯ ಸಂ:ಡಾ.ವೆಂಕಟೇಶ್ ಇಂದ್ವಾಡಿ, ಪ್ರಕಾಶಕರು:ಪ್ರಸಾರಾಂಗ, ಕನ್ನಡ ಹಂಪಿ ವಿಶ್ವವಿದ್ಯಾನಿಲಯ, ಹಂಪಿ, ಮು:೨೦೧೨

೩. ಮಧ್ಯಕಾಲೀನ ಕನ್ನಡ ಸಾಹಿತ್ಯ ಸಂ: ಡಾ.ಅಕ್ಕಮಹಾದೇವಿ ಕನ್ನಡ ಭಾಷಾಭಿವೃದ್ಧಿ ಯೋಜನೆ, ಕನ್ನಡ ವಿಶ್ವಕೋಶ, ವಿಷಯವಾರು ಗ್ರಂಥಮಾಲೆ, ಮು:೨೦೧೧, ಪ್ರಕಾಶಕರು: ಕು.ಸ.ಅ.ಸಂ. ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ.